## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 732 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.07.2023 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದ ಬಹುತೇಕ ಜೈಲುಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೈದಿಗಳನ್ನು ಬಂಧನದಲ್ಲಿಟ್ಟುರುವುದರಿಂದ ಹಲವಾರು ರೀತಿಯಲ್ಲಿ ಅವ್ಯವಸ್ಥೆಗಳಿಗೆ ಕಾರಣವಾಗಿರುವುದು ಹಾಗೂ ಕಾನೂನು ಸುವ್ಯವಸ್ಥೆಗೆ ಹಲವಾರು ಬಾರಿ ಭಂಗ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ 54 ವಿವಿಧ ಮಾದರಿಯ ಕಾರಾಗೃಹಗಳು ಕಾರ್ಯ ನಿರ್ವಹಿಸುತ್ತಿವೆ.<br>ಸದರಿ ಕಾರಾಗೃಹಗಳ ಪೈಕಿ 28 ಕಾರಾಗೃಹಗಳಲ್ಲಿ ಬಂದಿಗಳ ಅಧಿಕೃತ ಸ್ಥಳಾವಕಾಶಕ್ಕಿಂತ ಹೆಚ್ಚುವರಿ ಬಂದಿಗಳು ದಾಖಲಿದ್ದಾರೆ<br>ಕಾರಾಗೃಹಗಳಲ್ಲಿ ಪ್ರಸ್ತುತ ಸ್ಥಳಾವಕಾಶದ ಕೊರತೆ ಕಡಿಮೆ ಇರುವುದರಿಂದ ಕಾನೂನು ಸುವ್ಯವಸ್ಥೆ ಸಮಸ್ಯೆ ಗಮನಕ್ಕೆ ಬಂದಿರುವುದಿಲ್ಲ. |
| ಆ) ಬಂದಿದ್ದಲ್ಲಿ, ರಾಜ್ಯದಲ್ಲಿರುವ ಜೈಲುಗಳಲ್ಲಿ ಕೈದಿಗಳ ಬಂಧನದ ಸಾಮರ್ಥ್ಯದ ವಿವರಗಳೇನು; ಹಾಗೂ ಪ್ರಸ್ತುತ ಆ ಜೈಲುಗಳಲ್ಲಿ ಬಂಧನದಲ್ಲಿಟ್ಟಿರುವ ಕೈದಿಗಳ ಸಂಖ್ಯೆ ಎಷ್ಟು; | ರಾಜ್ಯದ ಕಾರಾಗೃಹಗಳಲ್ಲಿ 14,237 ಬಂದಿಗಳಿಗೆ ಅಧಿಕೃತ ಸ್ಥಳಾವಕಾಶವಿದ್ದು, ಪ್ರಸ್ತುತ ಕಾರಾಗೃಹಗಳಲ್ಲಿ 16,053 ಬಂದಿಗಳು ದಾಖಲಿರುತ್ತಾರೆ.<br>ಕಾರಾಗೃಹವಾರು ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಇ) ಯಾವ ಕಾಲಮಿತಿಯೊಳಗೆ ಸದರಿ ಜೈಲುಗಳನ್ನು ವಿಸ್ತರಣೆ ಮಾಡಿ, ಕೈದಿಗಳ ಬಂಧನದ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿ ಆ ಮೂಲಕ ಪ್ರಸ್ತುತ ಇರುವ ಒತ್ತಡವನ್ನು ಹೋಗಲಾಡಿಸಿ, ಸುಧಾರಣೆಗಳನ್ನು ತರಲಾಗುವುದು? | ರಾಜ್ಯದ ಕಾರಾಗೃಹಗಳಲ್ಲಿನ ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚುವರಿಯಾಗಿ ದಾಖಲಾಗಿರುವ ಮತ್ತು ಮುಂದಿನ ದಾಖಲಾತಿಗಳನ್ನು ಪರಿಗಣಿಸಿ 06 ನೂತನ ಕಾರಾಗೃಹಗಳನ್ನು ಮತ್ತು 08 ಕಾರಾಗೃಹಗಳಲ್ಲಿ ಹೆಚ್ಚುವರಿ ಬ್ಯಾರಕುಗಳನ್ನು ನಿರ್ಮಿಸಲಾಗುತ್ತಿದ್ದು, ಹಂತ ಹಂತವಾಗಿ ಅನುದಾನದ ಲಭ್ಯತೆಯ ಆಧಾರದ ಮೇರೆಗೆ, ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ.<br>ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |

ಹೆಚ್‌ಡಿ 101 ಪಿಆರ್‌ಎ 2023

(ಜಿ. ಪರಮೇಶ್ವರ)
ಗೃಹ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 732ಕ್ಕೆ ಪೂರಕ ಟಿಪ್ಪಣಿ.

*****

ರಾಜ್ಯದಲ್ಲಿ 09 ಕೇಂದ್ರ ಕಾರಾಗೃಹಗಳು, 21 ಜಿಲ್ಲಾ ಕಾರಾಗೃಹಗಳು, 23 ತಾಲ್ಲೂಕು ಉಪ ಕಾರಾಗೃಹಗಳು ಹಾಗೂ 01 ಬಯಲು ಕಾರಾಗೃಹ ಸೇರಿ ಒಟ್ಟು 54 ಕಾರಾಗೃಹಗಳು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕಾರಾಗೃಹಗಳಲ್ಲಿ ದಿನಾಂಕ: 05.07.2023ರಲ್ಲಿದ್ದಂತೆ 16,053 ಬಂದಿಗಳು ದಾಖಲಿರುತ್ತಾರೆ.

ರಾಜ್ಯದ ಕಾರಾಗೃಹಗಳಲ್ಲಿ 14,237 ಬಂದಿಗಳಿಗೆ ಅಧಿಕೃತ ಸ್ಥಳಾವಕಾಶವಿದ್ದು, ದಿನಾಂಕ:05.07.2023 ರಂತೆ ಶೇಕಡ 12.76 ರಷ್ಟು ಮಾತ್ರ ಹೆಚ್ಚುವರಿ ಬಂದಿಗಳು ದಾಖಲಿದ್ದು ಕೆಲವು ಕಾರಾಗೃಹಗಳಲ್ಲಿ ಮಾತ್ರ ಕಡಿಮೆ ಸ್ಥಳಾವಕಾಶದ ಕೊರತೆ ಇರುತ್ತದೆ.

ರಾಜ್ಯದ ಕಾರಾಗೃಹಗಳಲ್ಲಿನ ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚುವರಿಯಾಗಿ ದಾಖಲಾಗಿರುವ ಬಂದಿಗಳ ಸಂಖ್ಯೆ ಮತ್ತು ಮುಂದಿನ ದಾಖಲಾತಿಗಳನ್ನು ಪರಿಗಣಿಸಿ ನೂತನ ಕಾರಾಗೃಹಗಳನ್ನು ಮತ್ತು ಹೆಚ್ಚುವರಿ ಬ್ಯಾರಕುಗಳನ್ನು ನಿರ್ಮಿಸಲಾಗುತ್ತಿದೆ.

ಪ್ರಸ್ತುತ ಕೇಂದ್ರ ಕಾರಾಗೃಹ, ಬೆಂಗಳೂರು, ವಿಜಯಪುರ, ಮಂಗಳೂರು, ಬೀದರ್ ಇವುಗಳಲ್ಲಿ ಸ್ಥಳಾವಕಾಶದ ಕೊರತೆಯನ್ನು ಪರಿಗಣಿಸಿ, ಪ್ರತಿ ಒಂದು ಕೇಂದ್ರ ಕಾರಾಗೃಹವನ್ನು 1000 ಬಂದಿಗಳಿಗೆ ಸ್ಥಳಾವಕಾಶವಾಗುವಂತೆ ನೂತನ ಕಾರಾಗೃಹಗಳನ್ನು ನಿರ್ಮಿಸಲಾಗುತ್ತಿದೆ. ಉಳಿದಂತೆ ವಿರಾಜಪೇಟೆಯಲ್ಲಿ 80 ಬಂದಿಗಳ ಸಾಮರ್ಥ್ಯದ ತಾಲ್ಲೂಕು ಉಪಕಾರಾಗೃಹ, ಮತ್ತು ಅರಸಿಕೆರೆಯಲ್ಲಿ 50 ಬಂದಿಗಳ ಸಾಮರ್ಥ್ಯದ ತಾಲ್ಲೂಕು ಉಪಕಾರಾಗೃಹ ನಿರ್ಮಿಸಲಾಗುತ್ತಿದೆ. ಇದರಿಂದಾಗಿ 3,475 ಬಂದಿಗಳಿಗೆ ಸ್ಥಳಾವಕಾಶ ದೊರೆಯುತ್ತದೆ.

**ನೂತನ ಕಾರಾಗೃಹಗಳ ಕಾಮಗಾರಿ:**

| ಕ್ರ ಸಂ. | ಕಾರಾಗೃಹ | ಅಧಿಕೃತ ಸ್ಥಳಾವಕಾಶ | ನೂತನ ಕಾರಾಗೃಹದ ಸಾಮರ್ಥ್ಯ | ಹೆಚ್ಚುವರಿಯಾಗಿ ಲಭ್ಯವಾಗುವ ಸ್ಥಳಾವಕಾಶ |
|---|---|---|---|---|
| 1. | ಮಂಗಳೂರು ಕೇಂದ್ರ ಕಾರಾಗೃಹ | 210 | 1000 | 790 |
| 2. | ವಿಜಯಪುರ ಕೇಂದ್ರ ಕಾರಾಗೃಹ | 325 | 1000 | 675 |
| 3. | ಬೀದರ್ ಕೇಂದ್ರ ಕಾರಾಗೃಹ | 120 | 1000 | 880 |
| 4. | ಬೆಂಗಳೂರು ಗರಿಷ್ಠ ಭದ್ರತಾ ಕಾರಾಗೃಹ | – | 1000 | 1000 |
| 5. | ಅರಸೀಕೆರೆ ತಾಲ್ಲೂಕು ಉಪಕಾರಾಗೃಹ | – | 50 | 50 |
| 6. | ವಿರಾಜಪೇಟೆ ತಾಲ್ಲೂಕು ಉಪಕಾರಾಗೃಹ | – | 80 | 80 |
| | ಒಟ್ಟು | 655 | 4130 | 3475 |

## ಅನುಬಂಧ–1

| | ಕಾರಾಗೃಹಗಳ ಅಧಿಕೃತ ಸ್ಥಳಾವಕಾಶ ಮತ್ತು ಬಂದಿಗಳ ದಾಖಲಾತಿ ವಿವರ | | | |
|---|---|---|---|---|
| | ಕಾರಾಗೃಹಗಳ ಹೆಸರು | ಅಧಿಕೃತ ಸ್ಥಳಾವಕಾಶ | ಪ್ರಸ್ತುತ ದಾಖಲಿರುವ ಬಂದಿಗಳ ಸಂಖ್ಯೆ | ದಾಖಲಾತಿಯ ಶೇಕಡವಾರು ವಿವರ |
| 1 | ಕೇಂದ್ರ ಕಾರಾಗೃಹ, ಬೆಂಗಳೂರು | 4146 | 5261 | 126.89% |
| 2 | ಬಯಲು ಕಾರಾಗೃಹ, ದೇವನಹಳ್ಳಿ | 80 | 41 | 51.25% |
| 3 | ಜಿಲ್ಲಾ ಕಾರಾಗೃಹ, ರಾಮನಗರ | 223 | 312 | 139.91% |
| 4 | ಜಿಲ್ಲಾ ಕಾರಾಗೃಹ, ಕೋಲಾರ | 82 | 138 | 168.29% |
| 5 | ತಾಲ್ಲೂಕು ಕಾರಾಗೃಹ, ಕೆ.ಜಿ.ಎಫ್ | 76 | 79 | 103.95% |
| 6 | ಜಿಲ್ಲಾ ಕಾರಾಗೃಹ, ತುಮಕೂರು | 340 | 413 | 121.47% |
| 7 | ತಾಲ್ಲೂಕು ಕಾರಾಗೃಹ, ತಿಪಟೂರು | 25 | 0 | ದುರಸ್ತಿ ಕಾರ್ಯ ಪ್ರಗತಿಯಲ್ಲಿದ್ದು ಬಂದಿಗಳನ್ನು ತುಮಕೂರು ಕಾರಾಗೃಹಕ್ಕೆ ವರ್ಗಾಯಿಸಲಾಗಿದೆ |
| 8 | ಜಿಲ್ಲಾ ಕಾರಾಗೃಹ, ಚಿಕ್ಕಬಳ್ಳಾಪುರ | 192 | 225 | 117.19% |
| 9 | ತಾಲ್ಲೂಕು ಕಾರಾಗೃಹ, ಚಿಂತಾಮಣಿ | 125 | 85 | 68.00% |
| 10 | ಕೇಂದ್ರ ಕಾರಾಗೃಹ, ಮೈಸೂರು | 562 | 835 | 148.58% |
| 11 | ತಾಲ್ಲೂಕು ಕಾರಾಗೃಹ, ಕೆ.ಆರ್.ನಗರ | 115 | 101 | 87.83% |
| 12 | ತಾಲ್ಲೂಕು ಕಾರಾಗೃಹ, ನಂಜನಗೂಡು | 90 | 83 | 92.22% |
| 13 | ಜಿಲ್ಲಾ ಕಾರಾಗೃಹ, ಚಾಮರಾಜನಗರ | 105 | 129 | 122.86% |
| 14 | ಜಿಲ್ಲಾ ಕಾರಾಗೃಹ, ಮಂಡ್ಯ | 272 | 326 | 119.85% |
| 15 | ಜಿಲ್ಲಾ ಕಾರಾಗೃಹ, ಹಾಸನ | 259 | 311 | 120.08% |
| 16 | ತಾಲ್ಲೂಕು ಕಾರಾಗೃಹ, ಸಕಲೇಶಪುರ | 125 | 69 | 55.20% |
| 17 | ಜಿಲ್ಲಾ ಕಾರಾಗೃಹ, ಮಡಿಕೇರಿ | 300 | 190 | 63.33% |
| 18 | ಕೇಂದ್ರ ಕಾರಾಗೃಹ, ಶಿವಮೊಗ್ಗ | 500 | 704 | 140.80% |
| 19 | ಮಹಿಳಾ ಕೇಂದ್ರ ಕಾರಾಗೃಹ, ಶಿವಮೊಗ್ಗ | 100 | 58 | 58.00% |
| 20 | ತಾಲ್ಲೂಕು ಕಾರಾಗೃಹ, ಸಾಗರ | 54 | 17 | 31.48% |
| 21 | ಜಿಲ್ಲಾ ಕಾರಾಗೃಹ, ಮಂಗಳೂರು | 210 | 369 | 175.71% |
| 22 | ಜಿಲ್ಲಾ ಕಾರಾಗೃಹ, ಚಿಕ್ಕಮಗಳೂರು | 149 | 260 | 174.50% |
| 23 | ಜಿಲ್ಲಾ ಕಾರಾಗೃಹ, ಉಡುಪಿ | 110 | 107 | 97.27% |
| 24 | ಜಿಲ್ಲಾ ಕಾರಾಗೃಹ, ದಾವಣಗೆರೆ | 170 | 251 | 147.65% |
| 25 | ಜಿಲ್ಲಾ ಕಾರಾಗೃಹ, ಚಿತ್ರದುರ್ಗ | 300 | 259 | 86.33% |
| 26 | ಕೇಂದ್ರ ಕಾರಾಗೃಹ, ಬೆಳಗಾವಿ | 1162 | 920 | 79.17% |
| 27 | ತಾಲ್ಲೂಕು ಕಾರಾಗೃಹ, ಗೋಕಾಕ್ | 40 | 83 | 207.50% |

| | | | | |
|---|---|---|---|---|
| 28 | ತಾಲ್ಲೂಕು ಕಾರಾಗೃಹ, ಬೈಲಹೊಂಗಲ | 48 | 26 | 54.17% |
| 29 | ಜಿಲ್ಲಾ ಕಾರಾಗೃಹ, ಕಾರವಾರ | 230 | 118 | 51.30% |
| 30 | ತಾಲ್ಲೂಕು ಕಾರಾಗೃಹ, ಹಳಿಯಾಳ | 104 | 20 | 19.23% |
| 31 | ಕೇಂದ್ರ ಕಾರಾಗೃಹ, ಧಾರವಾಡ | 675 | 568 | 84.15% |
| 32 | ತಾಲ್ಲೂಕು ಕಾರಾಗೃಹ, ಹುಬ್ಬಳ್ಳಿ | 105 | 103 | 98.10% |
| 33 | ಜಿಲ್ಲಾ ಕಾರಾಗೃಹ, ಹಾವೇರಿ | 110 | 155 | 140.91% |
| 34 | ಜಿಲ್ಲಾ ಕಾರಾಗೃಹ, ಗದಗ | 48 | 124 | 258.33% |
| 35 | ಕೇಂದ್ರ ಕಾರಾಗೃಹ, ವಿಜಯಪುರ | 320 | 506 | 158.13% |
| 36 | ಜಿಲ್ಲಾ ಕಾರಾಗೃಹ, ಬಾಗಲಕೋಟೆ | 260 | 135 | 51.92% |
| 37 | ತಾಲ್ಲೂಕು ಕಾರಾಗೃಹ, ಜಮಖಂಡಿ | 200 | 79 | 39.50% |
| 38 | ಕೇಂದ್ರ ಕಾರಾಗೃಹ, ಕಲಬುರ್ಗಿ | 545 | 894 | 164.04% |
| 39 | ಜಿಲ್ಲಾ ಕಾರಾಗೃಹ, ಯಾದಗಿರಿ | 80 | 93 | 116.25% |
| 40 | ತಾಲ್ಲೂಕು ಕಾರಾಗೃಹ, ಸುರಪುರ | 50 | 61 | 122.00% |
| 41 | ಜಿಲ್ಲಾ ಕಾರಾಗೃಹ, ಬೀದರ್ | 184 | 155 | 84.24% |
| 42 | ತಾಲ್ಲೂಕು ಕಾರಾಗೃಹ, ಔರಾದ್ | 95 | 31 | 32.63% |
| 43 | ತಾಲ್ಲೂಕು ಕಾರಾಗೃಹ, ಹುಮನಾಬಾದ್ | 60 | 92 | 153.33% |
| 44 | ಕೇಂದ್ರ ಕಾರಾಗೃಹ, ಬಳ್ಳಾರಿ | 447 | 501 | 112.08% |
| 45 | ತಾಲ್ಲೂಕು ಕಾರಾಗೃಹ, ಹೊಸಪೇಟೆ | 45 | 54 | 120.00% |
| 46 | ತಾಲ್ಲೂಕು ಕಾರಾಗೃಹ, ಹಡಗಲಿ | 150 | 83 | 55.33% |
| 47 | ತಾಲ್ಲೂಕು ಕಾರಾಗೃಹ, ಹರಪ್ಪನಹಳ್ಳಿ | 100 | 83 | 83.00% |
| 48 | ಜಿಲ್ಲಾ ಕಾರಾಗೃಹ, ರಾಯಚೂರು | 160 | 223 | 139.38% |
| 49 | ತಾಲ್ಲೂಕು ಕಾರಾಗೃಹ, ದೇವದುರ್ಗ | 40 | 9 | 22.50% |
| 50 | ತಾಲ್ಲೂಕು ಕಾರಾಗೃಹ, ಲಿಂಗಸಗೂರು | 40 | 23 | 57.50% |
| 51 | ಜಿಲ್ಲಾ ಕಾರಾಗೃಹ, ಕೊಪ್ಪಳ | 110 | 154 | 140.00% |
| 52 | ಕಂದಾಯ ಕಾರಾಗೃಹ, ಶಿರಸಿ | 40 | 20 | 50.00% |
| 53 | ಕಂದಾಯ ಕಾರಾಗೃಹ, ಸೇಡಂ | 60 | 66 | 110.00% |
| 54 | ಕಂದಾಯ ಕಾರಾಗೃಹ, ಮಧುಗಿರಿ | 42 | 51 | 121.43% |
| | **ಒಟ್ಟು** | **14237** | **16053** | **112.76%** |

# ಅನುಬಂಧ-2

<u>ನೂತನ ಕಾರಾಗೃಹಗಳ ನಿರ್ಮಾಣ ವಿವರ:</u>

| ಕ್ರ ಸಂ. | ಕಾರಾಗೃಹ | ಅಧಿಕೃತ ಸ್ಥಳಾವಕಾಶ | ನೂತನ ಕಾರಾಗೃಹದ ಸಾಮರ್ಥ್ಯ | ಹೆಚ್ಚುವರಿಯಾಗಿ ಲಭ್ಯವಾಗುವ ಸ್ಥಳಾವಕಾಶ |
|---|---|---|---|---|
| 1. | ಮಂಗಳೂರು ಕೇಂದ್ರ ಕಾರಾಗೃಹ | 210 | 1000 | 790 |
| 2. | ವಿಜಯಪುರ ಕೇಂದ್ರ ಕಾರಾಗೃಹ | 325 | 1000 | 675 |
| 3. | ಬೀದರ್ ಕೇಂದ್ರ ಕಾರಾಗೃಹ | 120 | 1000 | 880 |
| 4. | ಬೆಂಗಳೂರು ಗರಿಷ್ಠ ಭದ್ರತಾ ಕಾರಾಗೃಹ | – | 1000 | 1000 |
| 5. | ಅರಸೀಕೆರೆ ತಾಲ್ಲೂಕು ಉಪಕಾರಾಗೃಹ | – | 50 | 50 |
| 6. | ವಿರಾಜಪೇಟೆ ತಾಲ್ಲೂಕು ಉಪಕಾರಾಗೃಹ | – | 80 | 80 |
| | ಒಟ್ಟು | 655 | 4130 | 3475 |

<u>ಹೆಚ್ಚುವರಿ ಬ್ಯಾರಕ್ ನಿರ್ಮಾಣದ ವಿವರ</u>

| ಕ್ರ.ಸಂ. | ಕಾರಾಗೃಹ | ಹೆಚ್ಚುವರಿ ಬ್ಯಾರಕ್‌ಗಳ ಸಾಮರ್ಥ್ಯ |
|---|---|---|
| 1. | ಕೇಂದ್ರ ಕಾರಾಗೃಹ, ಕಲಬುರ್ಗಿ | 300 |
| 2. | ಕೇಂದ್ರ ಕಾರಾಗೃಹ, ಮೈಸೂರು | 255 |
| 3. | ಕೇಂದ್ರ ಕಾರಾಗೃಹ, ಬಳ್ಳಾರಿ | 300 |
| 4. | ಜಿಲ್ಲಾ ಕಾರಾಗೃಹ, ಕೊಪ್ಪಳ | 150 |
| 5. | ಜಿಲ್ಲಾ ಕಾರಾಗೃಹ, ಹಾವೇರಿ | 100 |
| 6. | ಜಿಲ್ಲಾ ಕಾರಾಗೃಹ, ರಾಮನಗರ | 100 |
| 7. | ತಾಲ್ಲೂಕು ಉಪಕಾರಾಗೃಹ ಹುಬ್ಬಳ್ಳಿ | 80 |
| 8. | ತಾಲ್ಲೂಕು ಉಪಕಾರಾಗೃಹ ಗೋಕಾಕ್ | 60 |
| | ಒಟ್ಟು | **1345** |